ಶ್ರೀಮತಿ ಎಂಕೆ ನಾಗಮಣಿ ಈ ಸಮಸ್ಯೆ ಎಲ್ಲ ಕಡೆಯೂ ಇದೆ ಈಗಾಗಲೇ ಕಾಮಗಾರಿಗಳು ಪೂರ್ತಿಯಾಗಿ ಯಾರಿಗೂ ಹಣ ಬಂದಿಲ್ಲ ನಾವೆಲ್ಲ ತಪ್ಪಿಸಿಕೊಂಡು ಓಡಾಡಬೇಕು ಮಾಡಿದಂಥ ಕೆಲಸ ಕಾರ್ಯಗಳಿಗೂ ಹಣ ಕೊಟ್ಟಿಲ್ಲ ಅವರು ಹಣ ಕೇಳಿ ನಮ್ಮ ಮನೆ ಹತ್ತಿರ ಬಂದು ನಮಗೆ ಸಾಲ ಕೊಟ್ಟಿರುವವರ ತರಹ ಬಂದು ನಿಲ್ಲುತ್ತಿದ್ದಾರೆ ಸಂಬಂಧಪಟ್ಟಂಥ ಅಧಿಕಾರಿಗಳ ಗಮನಕ್ಕೆ ತೆಗೆದುಕೊಂಡು ಬಂದರೆ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲ, ನಾವೇನು ಮಾಡೋಣವೆಂದು CE ರವರು ನಮಗೆ ಉತ್ತರ ಕೊಡುತ್ತಾರೆ ಆದ್ದರಿಂದ,ದಯವಿಟ್ಟು, ಮಾನ್ಯ ಮಂತ್ರಿಗಳು ಇದರ ಕಡೆ ಗಮನ ಕೊಟ್ಟು ಎಲ್ಲೆಲ್ಲಿ ಕೊನೆ ಪಕ್ಷ ಕಾಮಗಾರಿಗಳು ಪೂರ್ತಿಯಾಗಿವೆಯೋ ಆ ಕೆಲಸ ಮಾಡಿದವರಿಗೆ ಹಣ ಬಿಡುಗಡೆ ಮಾಡಿಕೊಟ್ಟರೆ ನಾವು at least ಕ್ಷೇತ್ರದಲ್ಲಿ ನೆಮ್ಮದಿಯಾಗಿಯಾದರೂ ಓಡಾಡಬಹುದು

ಶ್ರೀ ಬಿ ಆರ್ ಪಾಟೀಲ್ ಕಳೆದ ವರ್ಷದ ಅನುಭವದಿಂದ ಈ ವರ್ಷ ಹೆದರಿ ನಾವು ಕ್ರಿಯಾ ಯೋಜನೆಯನ್ನು ಮಾಡಲಿಲ್ಲ (ಗೊಂದಲ)

ಅಧ್ಯಕ್ಷರು ಪ್ರಶ್ನೆ ಕೇಳುವುದಕ್ಕೆ ಶ್ರೀಮತಿ ಶಕುಂತಲಾ ಶೆಟ್ಟಿಯವರನ್ನು ಕರೆದಿದ್ದೇನೆ ಈಗ ಹಳೆಯ ಕತೆಯೇ ಆರಂಭವಾದರೆ ಹೀಗಾದರೆ, ಏನು ಮಾಡುವುದೆಂದು ನಮಗೆ ಅರ್ಥವಾಗುತ್ತಿಲ್ಲ

ಶ್ರೀ ಬಿ ಆರ್ ಪಾಟೀಲ್ ತಾವು ಏಕೆ ಸಾರ್ ಕೋಪ ಮಾಡಿಕೊಳ್ಳುತ್ತೀರಿ?

ಅಧ್ಯಕ್ಷರು ನಾನು ಪ್ರಶ್ನೆಯನ್ನು close ಮಾಡಿದ್ದೇನೆ ನಾನು ಅವರನ್ನು ಕರೆದಿದ್ದೇನೆ ಹೀಗೆ ಹೇಳಿದರೂ ಎಲ್ಲರೂ ಕೇಳಿದರೆ ಏನಿದು? ಶಕುಂತಲಾ ಶೆಟ್ಟಿಯವರೆ, ನೀವು ನಿಮ್ಮ ಪ್ರಶ್ನೆ ಕೇಳಿ

ಬಿತ್ತನೆ ಬಿಜಗಳನ್ನು ಸಮಯಕ್ಕೆ ಸರಿಯಾಗಿ ವಿತರಿಸುವುದು

57(441) **ಶ್ರೀಮತಿ ಶಕುಂತಲಾ ಶೆಟ್ಟಿ (ಪುತ್ತೂರು)** ಮಾನ್ಯ ಕೃಷಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ

ಅ) ಕೃಷಿ ಇಲಾಖೆಯ ವತಿಯಿಂದ ದ್ವಿದಳ ಧಾನ್ಯಗಳ ಬಿತ್ತನೆ ಬೀಜ ಸರಿಯಾದ ಸಮಯಕ್ಕೆ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ ಕೈಗೊಂಡ ಕ್ರಮವೇನು ,

ಇ) ರೈತ ಸಂಪರ್ಕ ಕೇಂದ್ರದ ಧ್ಯೇಯೋದ್ದೇಶಗಳೇನು ,

ಈ) ಇಲ್ಲಿ ಸಿಬ್ಬಂದಿ ಕೊರತೆ ಇರುವುದು ನಿಜವೇ, (ಖಾಲಿ ಹುದ್ದೆಗಳ ವಿವರವಾರು ಮಾಹಿತಿ ಒದಗಿಸುವುದು) ,

ಉ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಂಡೆಪ್ಪಕಾಶಂಪೂರ್ (ಕೃಷಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) 1 ಬೆಳೆ ಆಯ್ಕೆ, ಬೆಳೆ ಉತ್ಪಾದನಾ ಕ್ರಮಗಳು, ಮಾರುಕಟ್ಟೆ ಮಾಹಿತಿ ಇವೆ ಮುಂತಾದ ವಿಷಯಗಳ ಬಗ್ಗೆ ರೈತರಿಗೆ ಅಧುನಿಕ ಮಾಹಿತಿ ನೀಡುವುದು

2 ಕೃಷಿ ಪರಿಕರಣಗಳಾದ ಬೀಜ, ರಸಗೊಬ್ಬರ, ಸಸ್ಯಸಂರಕ್ಷಣಾ ಔಷಧಿ ಮುಂತಾದವುಗಳನ್ನು ಸ್ಥಳೀಯವಾಗಿ ಒದಗಿಸಲು ಸಂಯೋಜನೆ ಮಾಡುವುದು

3 ಬೀಜ ಮೊಳಕೆ ಮತ್ತು ಗುಣಮಟ್ಟ ಪರೀಕ್ಷೆ ಮಣ್ಣು ಪರೀಕ್ಷೆ ಇತ್ಯಾದಿ ಮೂಲ ಪರೀಕ್ಷಾ ಸೌಲಭ್ಯಗಳನ್ನು ಸ್ಥಳೀಯವಾಗಿ ಒದಗಿಸುವುದು

4 ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಬಿತ್ತನೆ ಮತ್ತು ಇತರ ಪರಿಕರಗಳ (ತಾಂತ್ರಿಕತೆಗಳು) ಪ್ರಾತ್ಯಕ್ಷಿಕೆ ಸೌಲಭ್ಯ ಒದಗಿಸುವುದು

5 ಸಾರ್ವಜನಿಕ ಮತ್ತು ಖಾಸಗಿ ರಂಗಗಳ ತಂತ್ರಜ್ಞಾನ ಮತ್ತು ಪರಿಕರಗಳ ತುಲನೆ / ಪರಿಶೀಲನೆಗೆ ಅವಕಾಶ ಒದಗಿಸುವುದು

ಈ) ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಉ) ನೇರ ನೇಮಕಾತಿ ಮೂಲಕ ಕೃಷಿ ಸಹಾಯಕರ ಹುದ್ದೆಗಳನ್ನು ತುಂಬಲು ವ್ಯಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ ಆದರೆ ಉಳಿದ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ತುಂಬಲು ಆಗಿಂದಾಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ

ವಿಸ ಪ್ರಶ್ನೆ 441 ಕ್ಕೆ ಅನುಬಂಧ – 1

ರೈತ ಸಂಪರ್ಕ ಕೇಂದ್ರಗಳ ಕೃಷಿ ಅಧಿಕಾರಿ ಹುದ್ದೆಗಳ ವಿವರ

ಕ್ರ.ಸಂ	ಜಿಲ್ಲೆ	ಮಂಜೂರಾದ	ಭರ್ತಿಯಾದ	ಖಾಲಿಯಿರುವ
1	ಬೆಂಗಳೂರು (ನ)	17	13	04
2	ಬೆಂಗಳೂರು (ಗ್ರಾ)	*34	11	23
3	ಕೋಲಾರ	53	10	43
4	ತುಮಕೂರು	50	19	31
5	ಶಿವಮೊಗ್ಗ	40	12	28
6	ಚಿತ್ರದುರ್ಗ	22	12	10
7	ದಾವಣಗೆರೆ	24	8	16
8	ಮೈಸೂರು	33	8	25
9	ಚಾಮರಾಜನಗರ	16	4	12
10	ಮಂಡ್ಯ	31	14	17
11	ಕೊಡಗು	16	3	13
12	ಹಾಸನ	38	7	31
13	ಚಿಕ್ಕಮಗಳೂರು	32	5	27
14	ದಕ್ಷಿಣ ಕನ್ನಡ	17	3	14
15	ಉಡುಪಿ	9	3	6
16	ಧಾರವಾಡ	14	5	9
17	ಗದಗ	11	1	10
18	ಹಾವೇರಿ	19	2	17
19	ಉತ್ತರ ಕನ್ನಡ	35	6	29
20	ಬೆಳಗಾವಿ	35	13	22
21	ಬಿಜಾಪುರ	18	10	8
22	ಬಾಗಲಕೋಟೆ	18	11	7
23	ರಾಯಚೂರು	37	4	33

24	ಕೊಪ್ಪಳ	20	6	14
25	ಬಳ್ಳಾರಿ	27	10	17
26	ಗುಲ್ಬಾರ್ಗ	48	4	44
27	ಬೀದರ್	30	8	22
	ಒಟ್ಟು	**744**	**212**	**532**

* ಬೆಂಗಳೂರು (ಗ್ರಾ) ಜಿಲ್ಲೆಯಲ್ಲಿ ಒಂದು ಹುದ್ದೆ ರದ್ದಾಗಿದೆ

ಅನುಬಂಧ – 2

ರೈತ ಸಂಪರ್ಕ ಕೇಂದ್ರಗಳ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ವಿವರ

ಕ್ರ.ಸಂ	ಜಿಲ್ಲೆ	ಮಂಜೂರಾದ	ಭರ್ತಿಯಾದ	ಖಾಲಿಯಿರುವ
1	ಬೆಂಗಳೂರು (ನ)	8	5	3
2	ಬೆಂಗಳೂರು (ಗ್ರಾ)	29	19	10
3	ಕೋಲಾರ	21	10	11
4	ತುಮಕೂರು	47	34	13
5	ಶಿವಮೊಗ್ಗ	16	9	7
6	ಚಿತ್ರದುರ್ಗ	44	30	14
7	ದಾವಣಗೆರೆ	35	14	21
8	ಮೈಸೂರು	49	28	21
9	ಚಾಮರಾಜನಗರ	23	13	10
10	ಮಂಡ್ಯ	28	16	12
11	ಕೊಡಗು	12	3	9
12	ಹಾಸನ	21	10	11
13	ಚಿಕ್ಕಮಗಳೂರು	21	10	11
14	ದಕ್ಷಿಣ ಕನ್ನಡ	11	6	5
15	ಉಡುಪಿ	13	11	2
16	ಧಾರವಾಡ	33	26	7
17	ಗದಗ	46	33	13

18	ಹಾವೇರಿ	50	41	9
19	ಉತ್ತರ ಕನ್ನಡ	16	15	1
20	ಬೆಳಗಾವಿ	101	62	39
21	ಬಿಜಾಪುರ	75	50	25
22	ಬಾಗಲಕೋಟೆ	50	39	11
23	ರಾಯಚೂರು	44	20	24
24	ಕೊಪ್ಪಳ	23	21	2
25	ಬಳ್ಳಾರಿ	49	26	23
26	ಗುಲ್ಬರ್ಗ	78	38	40
27	ಬೀದರ್	35	24	11
	ಒಟ್ಟು	**978**	**613**	**365**

ಅನುಬಂಧ – 3

ರೈತ ಸಂಪರ್ಕ ಕೇಂದ್ರಗಳ ಕೃಷಿ ಸಹಾಯಕರ ಹುದ್ದೆಗಳ ವಿವರ

ಕ್ರ.ಸಂ	ಜಿಲ್ಲೆ	ಮಂಜೂರಾದ	ಭರ್ತಿಯಾದ	ಖಾಲಿಯಿರುವ
1	ಬೆಂಗಳೂರು (ನ)	36	32	4
2	ಬೆಂಗಳೂರು (ಗ್ರಾ)	93	76	17
3	ಕೋಲಾರ	83	51	32
4	ತುಮಕೂರು	161	103	58
5	ಶಿವಮೊಗ್ಗ	96	71	25
6	ಚಿತ್ರದುರ್ಗ	119	81	38
7	ದಾವಣಗೆರೆ	118	82	36
8	ಮೈಸೂರು	96	75	21
9	ಚಾಮರಾಜನಗರ	52	32	20
10	ಮಂಡ್ಯ	97	47	50
11	ಕೊಡಗು	24	17	7
12	ಹಾಸನ	75	50	25

13	ಚಿಕ್ಕಮಗಳೂರು	51	40	11
14	ದಕ್ಷಿಣ ಕನ್ನಡ	68	35	33
15	ಉಡುಪಿ	34	29	5
16	ಧಾರವಾಡ	93	84	9
17	ಗದಗ	107	92	15
18	ಹಾವೇರಿ	119	95	24
19	ಉತ್ತರ ಕನ್ನಡ	115	98	17
20	ಬೆಳಗಾವಿ	287	263	24
21	ಬಿಜಾಪುರ	183	164	19
22	ಬಾಗಲಕೋಟೆ	102	94	8
23	ರಾಯಚೂರು	109	79	30
24	ಕೊಪ್ಪಳ	82	69	13
25	ಬಳ್ಳಾರಿ	99	64	35
26	ಗುಲ್ಬಾರ್ಗ	240	209	31
27	ಬೀದರ್	114	105	9
	ಒಟ್ಟು	**2853**	**2237**	**616**

ಶ್ರೀಮತಿ ಶಕುಂತಲಾ ಟಿ ಶೆಟ್ಟಿ ಅವರು ಉತ್ತರ ಕೊಟ್ಟಿದ್ದಾರೆ ಅದರೆ ನನ್ನ ಗಮನಕ್ಕೆ ಬಂದ ಹಾಗೆ, ಧಾನ್ಯಗಳ ಬಿತ್ತನೆ ಬೀಜ ಸಮಯಕ್ಕೆ ಸರಿಯಾಗಿ ಬರುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ ಅದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಮಂಜೂರಾದ 17 ಕೃಷಿ ಅಧಿಕಾರಿಗಳಲ್ಲಿ ಮೂರು ಜನ ಮಾತ್ರ ಇದ್ದು , ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜ ವಿತರಣೆಯಾಗಿದೆ ಎಂದಾದರೆ ನಿಜವಾಗಿಯೂ ಕೂಡ ನಾವು ಆ ಅಧಿಕಾರಿಗಳನ್ನು ಪ್ರಶಸ್ತಿ ಕೊಟ್ಟು ಗೌರವಿಸಬೇಕು ಮೂರೇ ಜನ ಅಧಿಕಾರಿಗಳು ಇದ್ದುಕೊಂಡು ನಮ್ಮ ಇಡೀ ಜಿಲ್ಲೆಯಲ್ಲಿ ಸಮಯಕ್ಕೆ ಸರಿಯಾಗಿ ಬಿತ್ತನೆ ಬೀಜಗಳನ್ನು ವಿತರಣೆ ಮಾಡಿದ್ದಾರೆಂದರೆ, ನಿಜವಾಗಿಯೂ ನಾವು ಅವರನ್ನು ಅಭಿನಂದಿಸಲೇಬೇಕು ಆದರೆ, ನಾನು ನಿಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಬಾಕಿ ಇರತಕ್ಕಂಥ 14 ಹುದ್ದೆಗಳನ್ನು ಯಾವಾಗ ತುಂಬುತ್ತೀರಿ? ಇಡೀ ರಾಜ್ಯದಲ್ಲಿ 744 ಹುದ್ದೆಗಳು ಮಂಜೂರಾಗಿದ್ದರೆ

ಅದರಲ್ಲಿ 532 ಹುದ್ದೆಗಳು ಖಾಲಿಇವೆ, ಇವುಗಳನ್ನು ಅದಷ್ಟು ಬೇಗ ಯಾವಾಗ ಭರ್ತಿ ಮಾಡುತ್ತೀರಿ ಎಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ

ಶ್ರೀ ಬಂಡೆಪ್ಪ ಕಾಶಂಪೂರ್ ಮಾನ್ಯ ಸದಸ್ಯರು ಹೇಳಿರುವುದು ನೂರಕ್ಕೆ ನೂರರಷ್ಟು ನಿಜ ಏಕೆಂದರೆ, ನಮ್ಮ ಇಲಾಖೆಯಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇವೆ ಅದರಲ್ಲಿ ಎರಡು ತಿಂಗಳ ಹಿಂದೆ ಕೆ ಪಿ ಎಸ್ ಸಿ ನಿಂದ 50 ಹುದ್ದೆಗಳನ್ನು ಅಡಿಷನಲ್ ಡೈರೆಕ್ಟರ್ ಎಂದು ತೆಗೆದುಕೊಳ್ಳಲಾಗಿದೆ ಇದರ ಜೊತೆಗೆ ಮತ್ತೆ ನಮಗೆ ಹಣಕಾಸಿನ ಇಲಾಖೆಯಿಂದ 687 ಪೋಸ್ಟ್‌ಗಳಿಗೆ ಅಪ್ರೂವಲ್ ಬಂದಿದೆ ಆದರೆ ನಮ್ಮ ಸಿ ಅಂಡ್ ಆರ್ ರೂಲ್ಸ್ ಪ್ರಕಾರ ನಾವು ಡೈರೆಕ್ಟ್ ಆಗಿ 410 ಪೋಸ್ಟ್‌ಗಳನ್ನು ಈಗಾಗಲೇ ತುಂಬುವಂಥ ಪ್ರಕ್ರಿಯೆಯನ್ನು ಪ್ರಾರಂಭಮಾಡಿದ್ದೇವೆ ಬಹಳ ಶೀರ್ಘದಲ್ಲಿ 410 ಅಗ್ರಿಕಲ್ಚರ್ ಆಫೀಸರ್ ಹುದ್ದೆಗಳನ್ನು ನಾವು ನೇಮಕ ಮಾಡುತ್ತಿದ್ದೇವೆ ಉಳಿದ ಹುದ್ದೆಗಳಿಗೆ ನಾವು ಸಿ ಅಂಡ್ ಆರ್ ರೂಲ್ಸ್‌ಗೆ ಸ್ವಲ್ಪ ಬದಲಾವಣೆ ತಂದು ಬಾಕಿ ನೇಮಕಾತಿಯನ್ನು ಮಾಡಲಾಗುವುದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ

ಶ್ರೀ ಎನ್ ಧರ್ಮಸಿಂಗ್ ಮಾನ್ಯ ಸಚಿವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾರೆ ಜೊತೆಗೆ ಅವರು ನಮ್ಮ ಇಲಾಖೆಗೆ ಸಾರಸಗಟಾಗಿ ಹಣಕಾಸಿನ ಇಲಾಖೆಯಿಂದ ಅಪ್ರೂವಲ್ ಆಗಿದೆ ಎಂದು ಹೇಳುತ್ತಾರೆ ತಾವು ಬೀದರ್ ಜಿಲ್ಲೆಯವರು, ಗುಲ್ಬರ್ಗಾ ಜಿಲ್ಲೆಯೂ ಅಲ್ಲಿಯೇ ಇದೆ ಗುಲ್ಬರ್ಗಾ ಜಿಲ್ಲೆಯಲ್ಲಿಯೇ ಸುಮಾರು 44 ಹುದ್ದೆಗಳನ್ನು ಕೃಷಿ ಇಲಾಖೆಯಲ್ಲಿ ಭರ್ತಿ ಮಾಡಬೇಕಾಗಿದ್ದು, ಅಲ್ಲಿ ಯಾರು ಕೆಲಸ ಮಾಡತಕ್ಕಂಥವರು ಇಲ್ಲ ತಾವು ಬಂದು ನೋಡಬೇಕು ಏಕೆಂದರೆ, ತಾವು ಬಂದು ವರ್ಷವಾಯಿತು ನಾವು ಈ ಬಗ್ಗೆ ಉಪಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದೇವೆ ಮಾನ್ಯ ಮುಖ್ಯಮಂತ್ರಿಗಳು ಪರವಾನಿಗೆ ಕೊಟ್ಟಿದ್ದಾರೆ ನೀವು ಬಂದು ಒಂದು ವರ್ಷವಾಯಿತು, ಯಾವಾಗ ಮಾಡುವುದು? ಇನ್ನೂ ಕೂಡ ನಿಮಗೆ ಕೃಷಿ ಅಧಿಕಾರಿಗಳು ಇಲ್ಲ ಇದು ಬಹಳ ಮುಖ್ಯವಾದುದು You are handlıng a very ımportant department. ನೀವು ಅದಕ್ಕೆ ಸರಿಯಾದ ರೀತಿಯಲ್ಲಿ ಮನಸ್ಸು ಕೊಟ್ಟು ಕೆಲಸ ಮಾಡಬೇಕು

ಶ್ರೀ ಬಂಡೆಪ್ಪ ಕಾಶಂಪೂರ್ ಇವತ್ತು ಇಡೀ ರಾಜ್ಯದಲ್ಲಿ 532 ಪೋಸ್ಟ್‌ಗಳು ಖಾಲಿ ಇದ್ದು ಇದಕ್ಕೆ ಈಗಾಗಲೇ ಏನು ಅಪ್ರೂವಲ್ ಸಿಕ್ಕಿದೆ, ಆ ಪ್ರಕಾರವಾಗಿ ನಾವು ಮುಂದಿನ ಎರಡೂವರೆ ತಿಂಗಳಿನಲ್ಲಿ ಆ ಪೋಸ್ಟ್‌ಗಳನ್ನು ಫಿಲ್ ಅಪ್ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಸದನಕ್ಕೆ ಹೇಳಬಯಸುತ್ತೇನೆ

ತುಂಗಭದ್ರಾ ನದಿಯಿಂದ ಕುಡಿಯುವ ನೀರು ಪೂರೈಸುವ ಯೋಜನೆ

58(257) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಗ್ರಾಮೀಣ ನೀರು, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮುಂಡರಗಿ ತಾಲ್ಲೂಕು ಬಿದರಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಕೆಲಸ ಎಂದಿನಿಂದ ಪ್ರಾರಂಭವಾಗಿದೆ ,

ಆ) ಈ ಕೆಲಸ ಮುಗಿಸಿ ಎಂದಿನಿಂದ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುವುದು ,

ಇ) ಯೋಜನೆಯಲ್ಲಿ ಅವ್ಯವಹಾರ ಆಗಿರುವುದು ನಿಜವೇ ,

ಈ) ಹಾಗಿದ್ದಲ್ಲಿ, ಎಷ್ಟು ಲಕ್ಷ ಆಗಿದೆ , (ವಿವರ ನೀಡುವುದು) ,

ಉ) ತಪ್ಪಿತಸ್ಥರು ಯಾರ್ಯಾರು ಮತ್ತು ಅವರ ಮೇಲೆ ಕೈಗೊಂಡ ಕ್ರಮಗಳೇನು ?

ಶ್ರೀ ಎಸ್ ಎ ರವೀಂದ್ರನಾಥ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಮುಂಡರಗಿ ತಾಲ್ಲೂಕು ಬಿದರಹಳ್ಳಿ ಹಾಗೂ ಇತರೆ 7 ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯ ಕಾಮಗಾರಿಯನ್ನು ದಿನಾಂಕ 19 03 2001ರಲ್ಲಿ ಪ್ರಾರಂಭಿಸಲಾಗಿದೆ

ಆ) ಸದರಿ ಯೋಜನೆಯ ಬಹುತೇಕ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಅಂತಿಮ ಘಟ್ಟದ ಕಾಮಗಾರಿಗಳು ಬಾಕಿ ಉಳಿದಿರುತ್ತವೆ ಬಿದರಹಳ್ಳಿ ಮತ್ತು ಮುಂಡವಾಡ ಗ್ರಾಮಗಳಿಗೆ ಈಗಾಗಲೇ ಕುಡಿಯುವ ನೀರು ಪೂರೈಸಲಾಗುತ್ತಿದ್ದು, ಚಿಕ್ಕವಡ್ಡಟ್ಟಿಯವರೆಗೆ ಅಲ್ಲಲ್ಲಿ ಸೋರಿಕೆಗಳಿವೆ ಅವುಗಳನ್ನು ಸರಿಪಡಿಸಿ ಎಲ್ಲಾ ಗ್ರಾಮಗಳಿಗೂ ನೀರು ಪೂರೈಕೆ ಮಾಡಲಾಗುವುದು